





**ಗೌರಮ್ಮ:** ಲಲಿತಮ್ಮ ನೀವು ಕಣ್ಣು ದಾನ ಮಾಡೋದಕ್ಕೆ ಒಪ್ಪಿಕೊಂಡಿದ್ದೀರಂತೆ?
**ಲಲಿತಮ್ಮ:** ಹೌದು, ನಿತ್ಯ ಧಾರಾವಾಹಿಗಳಲ್ಲಿ ಅತ್ತೆ ಸೊಸೆ ಜಗಳ ನೋಡಿ ಸಾಕಾಗಿದೆ. ಸತ್ತ ಮೇಲಾದರೂ ಇವುಗಳಿಂದ ದೂರ ಇರೋಣ ಅಂತ.

**ಮೀನಾ:** ನಳಿನಿ ಕಳೆದು ತಿಂಗಳು ನಮ್ಮ ಮನೆಯಿಂದ ಸಕ್ಕರೆ ತೆಗೆದುಕೊಂಡು ಹೋಗಿದ್ದು ನೆನಪಿದೆಯಾ?
**ನಳಿನಿ:** ಅಯ್ಯೋ ಮೀನಾ ನಿನ್ನೆ ಮೊನ್ನೆದೇ ನೆನಪಿರಲ್ಲ, ಇನ್ನು ಹೋದ ತಿಂಗಳಿನದು ನೆನಪಾಗುತ್ತಾ?

**ಉಮೇಶ:** ಜಯಣ್ಣ, ಕಾಫಿ ಬಾರ್‌ಗೂ ವೈನ್ ಬಾರ್‌ಗೂ ವ್ಯತ್ಯಾಸ ಏನು?
**ಜಯಣ್ಣ:** ಎಲ್ಲಾ ಪ್ರೀತಿ ಪ್ರೇಮಗಳು ಕಾಫಿ ಬಾರ್‌ನಲ್ಲಿ ಶುರುವಾಗಿ, ವೈನ್ ಬಾರ್‌ನಲ್ಲಿ ಮುಕ್ತಾಯಗೊಳ್ಳುತ್ತವೆ.

**ಗಿರೀಶ:** ವಿಚ್ಛೇದನ ಅರ್ಜಿ ಏನಾಯ್ತು?
**ಚಂದ್ರು:** ಅದೊಂದು ಸ್ವಾತಂತ್ರ್ಯ ಚಳವಳಿ ಬಿಡು.

**ಲಲಿತಾ:** ನಳಿನಿ ನೀನು ಇಷ್ಟಪಟ್ಟ ಭೀಮೇಶನನ್ನು ಮದುವೆಯಾಗದೆ ಏಕೆ ಸತಾಯಿಸ್ತಾ ಇದ್ದೀಯಾ?
**ನಳಿನಿ:** ನಾನು ಸಿಗದಿದ್ರೆ ಅವನು ಸಾಯ್ತಾನಂತೆ. ಹೇಗೆ ಸಾಯ್ತಾನೆ. ನೋಡೋಣ ಅಂತ.

**ಪದ್ಮ:** ಕಲಾ ನಿಮ್ಮ ಮಗಳು ಸ್ವಲ್ಪ ಕೂಡ ಸಮಯ ಹಾಳು ಮಾಡೋದಿಲ್ಲ ಅಂತ ಹೇಳ್ತಾ ಇದೀರಲ್ಲ ಅದು ಹೇಗೆ?
**ಕಲಾ:** ಪದ್ಮಾ, ನನ್ನ ಮಗಳು ಸಮಯ ಸಿಕ್ಕಾಗೆಲ್ಲ ಮೊಬೈಲ್ ನೋಡ್ತಾ ಇರುತ್ತಾಳೆ.

**ಪತ್ನಿ:** ಲಲಿತಾಳ ಯಜಮಾನರು ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ?
**ಪತಿ:** ಅವನಿಗೆ ನನ್ನಷ್ಟು ತಾಳ್ಮೆ ಇಲ್ವಲ್ಲ.

**ಪತ್ನಿ:** ಮೊದಲೆಲ್ಲಾ ಪ್ರೀತಿಯಿಂದ ನಿಮ್ಮ ತಟ್ಟೆಯಲ್ಲಿರುವ ಊಟ ತಿನ್ನಿಸುತ್ತಾ ಇದ್ರಿ?
**ಪತಿ:** ಈಗ ನೀನು ಬಹಳ ರುಚಿಯಾಗಿ ಅಡುಗೆ ಮಾಡ್ತಾ ಇದ್ದೀಯ ಕಣೆ. ನಿನಗೆ ತಿನ್ನಿಸೋಕೆ ಮನಸು ಬರುತ್ತಿಲ್ಲ.

**ಟ್ರಾಫಿಕ್ ಇನ್‌ಸ್ಪೆಕ್ಟರ್:** ಏನ್ರಿ ಇಷ್ಟು ವೇಗವಾಗಿ ಕಾರನ್ನು ಓಡಿಸುತ್ತಾ ಬಂದ್ರಲ್ಲ. ಎಲ್ಲಿ ನಿಮ್ಮ ಲೈಸೆನ್ಸ್ ಕೊಡಿ?
**ಆತ:** ಸರ್ ನಾನು ಕಲೀತಾ ಇರೋದು ಕರೆಸ್ಪಾಂಡೆನ್ಸ್‌ನಲ್ಲಿ.

**ಕಿಟ್ಟಿ:** ಮೋಸ, ವಂಚನೆ ಮಾಡಿ ಜೀವನದಲ್ಲಿ ಯಾರೂ ಮುಂದೆ ಬರಲಾರರು ಅಲ್ವಾ?
**ರಮೇಶ:** ನಿನ್ನ ನೋಡಿದರೆ ಹಾಗೆನಿಸಲ್ಲ.

**ಆತ:** ಸರ್, ನಿಮ್ಮ ಶೋರೂಮಿಂದ ಮೋಟಾರ್ ಬೈಸಿಕಲ್ ಕೊಂಡಾಗ ಏನೇ ಮುರಿದರೂ ಸರಿ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ.
**ಮ್ಯಾನೇಜರ್:** ಹೌದು ಹೇಳಿದ್ದು ನಿಜ, ಅಂದ ಹಾಗೆ ಈಗ ಏನು ಮುರಿದಿದೆ?
**ಆತ:** ಈಗ ನನ್ನ ಕೈ ಮೂಳೆ ಮುರಿದಿದೆ.
**ಮ್ಯಾನೇಜರ್:** ನಾವು ಹೇಳಿದ್ದು, ವಾಹನದ ಬಗ್ಗೆ. ನಿಮ್ಮ ದೇಹದ ಭಾಗಗಳು ಮುರಿದರೆ ಇನ್‌ಶ್ಯುರೆನ್ಸ್ ಕಂಪನಿಯನ್ನು ಸಂಪರ್ಕಿಸಿ.
**ಆತ:** ಹೌದಾ... ನೀವು ಹೇಳಿದ್ದನ್ನು ತಪ್ಪಾಗಿ ಅರ್ಥೈಸಿ, ಇನ್‌ಶ್ಯುರೆನ್ಸ್ ಮಾಡಿಸಲೇ ಇಲ್ಲ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ